**ಅಸಲು ದಾವಾ ನಂಃ 36/2014**
**ಪಿ.ಡಬ್ಲ್ಯೂಃ 2 ,**

**ದಿನಾಂಕ :25-03-2026ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟಿ ಸವಾಲು :- ಶ್ರೀ. ಎಸ್. ಎ. ಕೆ. ಪ್ರತಿವಾದಿ ಪರ ವಕೀಲರಿಂದ :**

2ನೇ ಪ್ರತಿವಾದಿ ಈ ನ್ಯಾಯಾಲಯದಲ್ಲಿ ಓ.ಎಸ್. 71/2011 ಸಲ್ಲಿಸಿದ್ದರು ಎಂದರೆ ಸರಿ. ಅದರಂತೆ ಸದರಿ ದಾವೆಯಲ್ಲಿ ಡಿಕ್ರಿ ಆಗಿದೆ ಎಂದರೆ ಸರಿ. ಸದರಿ ಡಿಕ್ರಿ ಮೇಲೆ ನಮ್ಮ ತಾಯಿ ಆರ್.ಎ. ನಂ:125/2011 ಮೇಲ್ಮನವಿ ಸಲ್ಲಿಸಿದ್ದರು ಎಂದರೆ ಸರಿ. ಸದರಿ ಮೇಲ್ಮನವಿ ದಂಡದೊಂದಿಗೆ ವಜಾ ಆಗಿದೆ ಎಂದರೆ ಸರಿ. ಓ.ಎಸ್. 71/2011 ಆಧಾರದ ಮೇಲೆ ನಮ್ಮ ತಾಯಿ ಎಫ್.ಡಿ.ಪಿ. 7/2013 ಸಲ್ಲಿಸಿದ್ದರು ಎಂದರೆ ಸರಿ. ಸದರಿ ವಿಚಾರಣೆಗೆ ಬಾಕಿ ಇದೆ ಎಂದರೆ ಸರಿ. ಸದರಿ ಎಫ್.ಡಿ.ಪಿ. ವಿಳಂಬ ಮಾಡಲು ಈ ದಾವೆ ಸಲ್ಲಿದ್ದಾರೆ ಎಂದರೆ ಸರಿಯಲ್ಲ . ಸದರಿ 2ನೇ ಪ್ರತಿವಾದಿ ಸಲ್ಲಿಸಿದ ದಾವೆಯಲ್ಲಿ ಈ ದಾವಾ ಆಸ್ತಿಗಳು ಪಿತ್ರಾರ್ಜಿತ ಆಸ್ತಿಗಳು ಎಂದು ಓ.ಎಸ್. ನಂ: 71/2011 ರಲ್ಲಿ ತಿಳಿಸಿಲ್ಲಾ ಎಂದರೆ ಸರಿಯಲ್ಲ.

**( ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು 2 ನಿಮಿಷಗಳ ಕಾಲವಕಾಶ ಕೇಳಿದ್ದರಿಂದ ಈ ಪ್ರಕರಣವನ್ನು ಸಂಜೆ 5-00 ಗಂಟೆಗೆ ಮುಂದೂಡಲಾಯಿತು. )**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)

**ಓ.ಹೇ.ಕೇ.ಸರಿ.ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು**
**ಚಿತ್ತಾಪೂರ.**